ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉ ನಿ : ಸುಮಪ : 2019–20** **ದಿನಾಂಕ: 04–02–2020**

# ಪತ್ರಿಕಾ ಆಮಂತ್ರಣ

1. Urban Development Department, Government of Karnataka along with Elets Techno media invites Karnataka Smart Cities Investment Summit

**Chief Guest**:

R. Ashok,
Minister for Revenue and Municipal Administration, Government of Karnataka.

**Programme Mentor:**

Vijay Bhaskar T.M
Chief Secretary,
Government of Karnataka.

Place: 05-02-2020 Wednesday Time: 9.00 am.

Venue: Hotel Sheraton Grand, Brigade Gateway, Bengaluru.

**2. ರಾಜ್ಯ ಮಟ್ಟದ ಮೂರನೇ ಶಿಕ್ಷಕರ ಅನುಭವಾತ್ಮಕ ಸಂಶೋಧನಾ ವಿಚಾರ ಸಂಕಿರಣ.**
**(ಫೆ. 5 ಮತ್ತು 6) ಉದ್ಘಾಟನೆ ಸಮಾರಂಭ.**

**<u>ಉದ್ಘಾಟನೆ:</u>**

**ಡಾ. ಕೆ.ಜಿ. ಜಗದೀಶ್, ಭಾ.ಆ.ಸೇ.**
**ಆಯುಕ್ತರು,**
**ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ,**

**<u>ಮುಖ್ಯ ಅತಿಥಿಗಳು:</u>**
**ಎಂ.ಆರ್. ಮಾರುತಿ,**
**ನಿರ್ದೇಶಕರು,**
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ,**

**<u>ಅಧ್ಯಕ್ಷತೆ:</u>**

**ಡಾ. ಆರ್. ಬಾಲಸುಬ್ರಹ್ಮಣ್ಯಂ, ಸಂಸ್ಥಾಪಕರು ಹಾಗೂ ಅಧ್ಯಕ್ಷರು,**
**ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್‌ಮೆಂಟ್, ಮೈಸೂರು.**

**ದಿನಾಂಕ: 05–02–2020 ಬುಧವಾರ, ಸಮಯ: 10–30 ಗಂಟೆಗೆ**

**ಸ್ಥಳ: ಕೇಂದ್ರಿಯ ತರಬೇತಿ ಸಂಸ್ಥೆ, ಕೆ.ಎಂ.ಎಫ್. ಸಂಕೀರ್ಣ, ಡಾ. ಎಂ.ಹೆಚ್. ಮರೀಗೌಡ ರಸ್ತೆ, ಬೆಂಗಳೂರು ಡೈರಿ ಹತ್ತಿರ, ಬೆಂಗಳೂರು**

## <u>ಪತ್ರಿಕಾ ಪ್ರಕಟಣೆ</u>

**<u>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ</u>**
1) ‘ಜನಸ್ನೇಹಿ’ ಸಹಾಯ ವೇದಿಕೆ
2) ಸಹಾಯವಾಣಿ 99802 99802

**<u>ಕಾರ್ಮಿಕ ಇಲಾಖೆಯ</u>**
3) ‘ಆಶಾದೀಪ ಯೋಜನೆ’ ಅಂತರ್ಜಾಲ (ಬ್ಲಾಕ್‌ಚೈನ್ ತಂತ್ರಜ್ಞಾನದೊಂದಿಗೆ)
4) ಕಾರ್ಮಿಕ ಸಹಾಯವಾಣಿ 155214, 93333 33684

1) ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಬಳಕೆಯಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿದ್ದು, ಮಾಹಿತಿ ತಂತ್ರಜ್ಞಾನದ ನಾಗರೀಕ ಸ್ನೇಹಿ ಆಡಳಿತದ ಮೂಲಕ ಒದಗಿಸಲು ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

2) ರಾಜ್ಯದಲ್ಲಿ ಈಗಾಗಲೇ ಯಶಸ್ವಿಯಾಗಿ ಅನುಷ್ಠಾನಗೊಂಡಿರುವ "ಭೂಮಿ ಯೋಜನೆ, ಸಕಾಲ ಯೋಜನೆ, ಸೇವಾಸಿಂಧು ಯೋಜನೆ, ದಿಶಾಂಕ್ ಆ್ಯಪ್" ಗಳು ಮಾಹಿತಿ ತಂತ್ರಜ್ಞಾನದ ಮೂಲಕ ಸಾರ್ವಜನಿಕರಿಗೆ ಸರ್ಕಾರದ ಸೇವೆಗಳನ್ನು ಸುಲಭವಾಗಿ ತಲುಪಿಸಲು ಯಶಸ್ವಿಯಾಗಿವೆ.

3) ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳು ಈಗಾಗಲೇ ತಮ್ಮ ಕಚೇರಿಗಳಲ್ಲಿ ಇ-ಆಡಳಿತವನ್ನು ಅಳವಡಿಸಿಕೊಂಡಿದ್ದು, ಕಾಗದರಹಿತ ಕಡತ ವಿಲೇವಾರಿಯನ್ನು ನಡೆಸುತ್ತಿವೆ.

4) ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಸರ್ಕಾರಕ್ಕೆ ತಿಳಿಸಲು ವಿವಿಧ ಇಲಾಖೆಗಳು ಈಗಾಗಲೇ ಸಹಾಯವಾಣಿ ಕೇಂದ್ರಗಳನ್ನು ಕೂಡ ಸ್ಥಾಪಿಸಿಕೊಂಡಿವೆ.

5) ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸರ್ಕಾರದ ಯೋಜನೆಗಳಿಗೆ ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ ನೀಡುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿದೆ.

6) ಸಾರ್ವಜನಿಕ ಸಂಪರ್ಕ ಇಲಾಖೆಯಾಗಿ ರಾಜ್ಯದ ಜನತೆ ಮತ್ತು ಸರ್ಕಾರದ ನಡುವೆ ಉತ್ತಮ ಸಂಬಂಧವನ್ನು ಬೆಸೆಯುವ ಮತ್ತು ಜನರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವ ಹೊಸ ಯೋಜನೆಯನ್ನು ರೂಪಿಸಿದೆ.

7) ಸಾಮಾಜಿಕ ಮಾಧ್ಯಮಗಳಲ್ಲಿ ಜನರ ಸಮಸ್ಯೆಗಳ ಬಗ್ಗೆ ಬರುವ ಅಹವಾಲುಗಳನ್ನು, ಸುದ್ದಿ ಮಾಧ್ಯಮಗಳಲ್ಲಿ ಬರುವ ಕುಂದು ಕೊರತೆಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕಳುಹಿಸಿ ಅವುಗಳಿಗೆ ಪರಿಹಾರ ದೊರಕಿಸುವ ಸಲುವಾಗಿ ಇಲಾಖೆಯಲ್ಲಿ "ಮಾಧ್ಯಮ ಸ್ಪಂದನಾ ಕೇಂದ್ರ"ವನ್ನು ಸಹ ಸ್ಥಾಪಿಸಲಾಗಿದೆ.

8) ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ನೂತನವಾಗಿ "ಜನಸ್ನೇಹಿ" ಸಹಾಯ ವೇದಿಕೆಯನ್ನು ಪ್ರಾರಂಭಿಸಿರುತ್ತದೆ. ಹಾಗೆಯೇ, ಕಾರ್ಮಿಕ ಇಲಾಖೆಯು ಸಾರ್ವಜನಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವ "ಆಶಾದೀಪ ಯೋಜನೆ" ಅಂತರ್ಜಾಲವನ್ನು ಬ್ಲಾಕ್‌ಚೈನ್ ತಂತ್ರಜ್ಞಾನದೊಂದಿಗೆ ಮತ್ತು ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಸರ್ಕಾರಕ್ಕೆ ತಿಳಿಸಲು "ಕಾರ್ಮಿಕ ಸಹಾಯವಾಣಿ"ಯನ್ನು ಪ್ರಾರಂಭಿಸಿರುತ್ತದೆ. ಈ ಕಾರ್ಯಕ್ರಮಗಳನ್ನು ಮಾನ್ಯ ಮುಖ್ಯಮಂತ್ರಿಗಳು ದಿನಾಂಕ : 04-02-2020 ರಂದು ಸಂಜೆ 5.30 ಗಂಟೆಗೆ ಚಾಲನೆ ನೀಡಲಿದ್ದಾರೆ.

೨) ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಈಗಾಗಲೇ ನಿರ್ವಹಣೆಗೆ ಪರಿಣಿತರ ತಂಡವನ್ನು ರಚಿಸಲಾಗಿದ್ದು, 24 ಗಂಟೆಗಳ ಕಾಲ ಟ್ವೀಟರ್ ಖಾತೆಯಲ್ಲಿ ಮತ್ತು ಸಹಾಯವಾಣಿ ಮೂಲಕ ಸಾರ್ವಜನಿಕರ ದೂರುಗಳನ್ನು ಸ್ವೀಕರಿಸಲಾಗುವುದು. ಇವುಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕೂಡಲೇ ಕಳುಹಿಸಿ ಸರ್ಕಾರ ಮತ್ತು ಜನರ ನಡುವೆ ಸೇತುವೆಯಾಗಿ ಕಾರ್ಯ ನಿರ್ವಹಿಸುವ ಕಾರ್ಯವನ್ನು ಇಲಾಖೆ ನಿರ್ವಹಿಸಲಿದೆ.

**ಏನಿದು ಜನಸ್ನೇಹಿ ಸಹಾಯ ವೇದಿಕೆ ?**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ "ಜನಸ್ನೇಹಿ" ಸಹಾಯ ವೇದಿಕೆಯಲ್ಲಿ ಸಾರ್ವಜನಿಕ ಹಿತಾಸಕ್ತಿಯ ಕುಂದು-ಕೊರತೆಗಳನ್ನು ಮೊಬೈಲ್ ದೂರವಾಣಿ ಸಂಖ್ಯೆ : 99802 99802 ಗೆ ವಾಟ್ಸ್ ಆಪ್ ಕಳುಹಿಸುವ ಮೂಲಕ ಅಥವಾ ಇಲಾಖೆಯ ಟ್ವೀಟರ್ ಖಾತೆ @Karnataka_dipr ಮೂಲಕ ಟ್ವೀಟ್ ಮಾಡುವ ಮೂಲಕ ಅಹವಾಲುಗಳನ್ನು ಸರ್ಕಾರದ ಗಮನಕ್ಕೆ ತರಬಹುದಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಇಂತಹ ಅಹವಾಲುಗಳನ್ನು ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತಂದು ಜನರ ಅಹವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ಜನಸ್ನೇಹಿ ವೇದಿಕೆಯಾಗಿ ಕಾರ್ಯನಿರ್ವಹಿಸಲಿದೆ.

ಪ್ರಾಯೋಗಿಕವಾಗಿ ಈ ಸೇವೆಯನ್ನು ಕಳೆದ ಒಂದು ತಿಂಗಳಿನಿಂದ ಪ್ರಾರಂಭಿಸಲಾಗಿದ್ದು ಪ್ರಮುಖ ವಿಷಯಗಳಿಗೆ ಸಂಬಂಧಿಸಿದ ಹಲವು ಅಹವಾಲುಗಳಿಗೆ ವಿವಿಧ ಇಲಾಖೆಗಳಿಂದ ಪರಿಹಾರ ದೊರಕಿಸಿಕೊಡುವಲ್ಲಿ ಇಲಾಖೆ ಯಶಸ್ವಿಯಾಗಿದೆ.

**ಆಶಾದೀಪ ಯೋಜನೆ – ಕಾರ್ಮಿಕ ಸಹಾಯವಾಣಿ !**

ರಾಜ್ಯದಲ್ಲಿ ಪ್ರಪ್ರಥಮವಾಗಿ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನವೇ **ಆಶಾದೀಪ ಯೋಜನೆ – ಕಾರ್ಮಿಕ ಸಹಾಯವಾಣಿ.** ವಿವಿಧ ಕ್ಷೇತ್ರಗಳಲ್ಲಿನ ಕಾರ್ಮಿಕರಿಗೆ ಸೂಕ್ತ ಮಾಹಿತಿಯನ್ನು ನೀಡಲು ಮತ್ತು ಅವರ ಕುಂದು ಕೊರತೆಗಳ ಬಗ್ಗೆ ದೂರನ್ನು ಸ್ವೀಕರಿಸಿ ಪರಿಹಾರ ಕಲ್ಪಿಸುವ ಸದುದ್ದೇಶದಿಂದ ಕಾರ್ಮಿಕ ಇಲಾಖೆಯು ಬನ್ನೇರುಘಟ್ಟ ರಸ್ತೆಯಲ್ಲಿರುವ ತನ್ನ ಪ್ರಧಾನ ಕಚೇರಿಯ ಆವರಣದಲ್ಲಿ ದಿನದ 24 ಗಂಟೆ ವಾರದ ಏಳು ದಿನಗಳೂ ಹಾಗೂ ವರ್ಷದ 365 ದಿನಗಳೂ ಕಾರ್ಯನಿರ್ವಹಿಸುವ ನಿಯಂತ್ರಣಾ ಕೊಠಡಿಯನ್ನು ಸ್ಥಾಪಿಸಿದೆ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಟ್ಟಡದ ನಾಲ್ಕನೇ ಮಹಡಿಯಲ್ಲಿ ಸ್ಥಾಪಿಸಿರುವ ಈ ನಿಯಂತ್ರಣಾ ಕೊಠಡಿಯನ್ನು ಕಾರ್ಮಿಕರು ತಮ್ಮ ಕುಂದು-ಕೊರತೆಗಳನ್ನು ಹಾಗೂ ಸಮಸ್ಯೆಗಳನ್ನು ಶುಲ್ಕ-ರಹಿತ ಸಹಾಯವಾಣಿ ಸಂಖ್ಯೆ : 155214 ಕ್ಕೆ ಕರೆ ಮಾಡುವುದರ ಮೂಲಕ

ಸಂಪರ್ಕಿಸಿ ಅಹವಾಲುಗಳನ್ನು ನೋಂದಾಯಿಸಬಹುದಾಗಿದೆ. ಅಲ್ಲದೆ, ವಾಟ್ಸಾಪ್ ಸಂಖ್ಯೆ : 93333 33684 ರ ಮೂಲಕವೂ ದಾಖಲಿಸಬಹುದಾಗಿದೆ.

ಅಲ್ಲದೆ, ಕಾರ್ಮಿಕ ಇಲಾಖೆಯ ಸಾಮಾಜಿಕ ಜಾಲ ತಾಣಗಳಾದ ಇ-ಮೇಲ್, ಟ್ವಿಟರ್, ವಾಟ್ಸ್ ಆಪ್, ಟೆಲಿಗ್ರಾಂ ಅಥವಾ ಎಸ್‌ಎಂಎಸ್ ಮೂಲಕವೂ ಮಾಹಿತಿ ಪಡೆಯಬಹುದು ಅಥವಾ ಸಲಹೆ ನೀಡಬಹುದಾಗಿದೆ. ಈ ಸಹಾಯವಾಣಿಯು ತೊಂದರೆಯಲ್ಲಿ ಇರುವ ಅಥವಾ ನೊಂದ ಕಾರ್ಮಿಕರಿಗೆ ಭಾವನಾತ್ಮಕ ಬೆಂಬಲವನ್ನು ನೀಡಲಿದೆ.

ಈ ಸಹಾಯವಾಣಿಯು ಕೈಗಾರಿಕಾ ರಾಸಾಯನಿಕ ಅಪಘಾತಗಳು ಮತ್ತು ವಿಪತ್ತುಗಳ ಸಂದರ್ಭದಲ್ಲಿ ತುರ್ತು ಪರಿಸ್ಥಿತಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯಕವಾಗುವ "ತುರ್ತು ನಿಯಂತ್ರಣಾ ಕೇಂದ್ರ" ವಾಗಿಯೂ ಕೂಡಾ ಕಾರ್ಯನಿರ್ವಹಿಸಲು ಸಜ್ಜಾಗಿದೆ.

ಇದು ಮಹಿಳಾ ಕಾರ್ಮಿಕರಿಗೂ ಸಕಾಲಿಕ ನೆರವು ಒದಗಿಸಿ ಸಹಕಾರಿಯಾಗಲಿದೆ. ಯಾವುದೇ ಮಹಿಳೆ ಕೆಲಸದಿಂದ ಮನೆಗೆ ತಡವಾಗಿ ತೆರಳುವ ಸಂದರ್ಭದಲ್ಲಿ ಆಕೆ ಸುರಕ್ಷಿತವಾಗಿ ಮನೆಗೆ ತಲುಪುವವರೆಗೆ ಆಕೆಯ ಚಲನ-ವಲನಗಳತ್ತ ಸೋದರನಂತೆ ನಿಗಾ ವಹಿಸಲು ನಿಯಂತ್ರಣಾ ಕೊಠಡಿಯನ್ನು ಕೋರಬಹುದು. ಈ ಸುರಕ್ಷತಾ ಸೇವೆಯನ್ನು 24*7 ಆಕೆ ಅಥವಾ ಆಕೆಯ ತಂದೆ-ತಾಯಿ ಬಳಸಬಹುದು. ಅಲ್ಲದೆ, ಈ ಸಹಾಯವಾಣಿಯು ಕಾರ್ಮಿಕ ಇಲಾಖೆಯಲ್ಲಿ ಭ್ರಷ್ಟಾಚಾರ ವಿರೋಧಿ ಸಹಾಯವಾಣಿಯಾಗಿಯೂ ಕಾರ್ಯನಿರ್ವಹಿಸಲಿದೆ. ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿನ ದೂರುಗಳನ್ನು ಈ ಸಹಾಯವಾಣಿಯಲ್ಲಿ ದಾಖಲಿಸಬಹದು.

ಶುಲ್ಕ ರಹಿತ ಕಾರ್ಮಿಕ ಸಹಾಯವಾಣಿಯು ಸ್ಥಾಪನೆಯಾದ ದಿನದಿಂದ 24*7 ಕಾರ್ಯನಿರ್ವಹಿಸುತ್ತದೆ ಮತ್ತು ದೂರುಗಳನ್ನು ಸ್ವೀಕರಿಸಿ ಪರಿಹರಿಸಲು ಸನ್ನದ್ಧವಾಗಿದೆ. ಕಾರ್ಮಿಕರು ಮತ್ತು ಕೈಗಾರಿಕೋದ್ಯಮಿಗಳ ಸಮಸ್ಯೆಗಳನ್ನು ಟ್ವಿಟರ್: @karmika_sahaya, ವಾಟ್ಸಾಪ್ ಮತ್ತು ಟೆಲಿಗ್ರಾಂ ಮೂಲಕ ಅದರ ಸಂಖ್ಯೆ 93333 33684 ಮತ್ತು ಇ-ಮೇಲ್ labourhelpline.karnataka.govt@gmail.com ಮೂಲಕವೂ ದೂರುಗಳನ್ನು ಸಲ್ಲಿಸಿ ಪರಿಹಾರ ಪಡೆದುಕೊಳ್ಳಬಹುದಾಗಿದೆ.

ಕಳೆದ ಅಕ್ಟೋಬರ್ 21 ರಿಂದ ಈಗಾಗಲೇ ಪ್ರಾಯೋಗಿಕವಾಗಿ ಪ್ರಾರಂಭವಾಗಿರುವ ಈ ಸಹಾಯವಾಣಿಯು ಒಟ್ಟು 9227 ವಿಷಯಸೂಚಿ ಡಾಕೆಟ್‌ಗಳನ್ನು ಸೃಜಿಸಿದೆ. ಅವುಗಳ ಪೈಕಿ 8642 ಡಾಕೆಟ್‌ಗಳಿಗೆ ಪರಿಹಾರವನ್ನು ಕಲ್ಪಿಸಿದೆ. ಸಹಾಯವಾಣಿ ತಂಡವು ಕುಂದು ಕೊರತೆಗಳಿಗೆ ಪರಿಹಾರ ಕಲ್ಪಿಸಿಕೊಡುವ ತನ್ನ ಗುರಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕ ಸಾಧಿಸಿ ದೂರು ನಿವಾರಣೆಯ ಬಗ್ಗೆ ಮಾಹಿತಿ ಪಡೆದು ದೂರುದಾರರಿಗೆ ನಿಗದಿತ ಅವಧಿಯೊಳಗೆ ಮಾಹಿತಿ ನೀಡುತ್ತಿದೆ.

ವಿವಿಧ ಕಾರ್ಮಿಕ ಕಾನೂನುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ, ಸಂಘಟಿತ ಮತ್ತು ಅಸಂಘಟಿತ ವಲಯದ ಕಾರ್ಮಿಕ ವರ್ಗದವರಿಗೆ ಸರ್ಕಾರದ ಸವಲತ್ತು ಮತ್ತು ಸೌಲಭ್ಯಗಳನ್ನು ಒದಗಿಸುವ

ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ವಿಸ್ತರಿಸಿ ಅವರ ಹಿತಾಸಕ್ತಿಯನ್ನು ಕಾಪಾಡುವ ಕಾರ್ಮಿಕ ಇಲಾಖೆಯ ಪ್ರಯತ್ನದ ಒಂದು ಭಾಗವಾಗಿ ಈ ಸಹಾಯವಾಣಿ ಕಾರ್ಯ ನಿರ್ವಹಿಸುತ್ತಿದೆ.

ಇದು ಕಾರ್ಮಿಕ ಇಲಾಖೆ ಮತ್ತು ಕಾರ್ಮಿಕರ ಅದರಲ್ಲೂ ವಿಶೇಷವಾಗಿ ಅಸಂಘಟಿತ ಕಾರ್ಮಿಕರು, ಬಾಲ ಕಾರ್ಮಿಕರು, ವಲಸೆ ಕಾರ್ಮಿಕರು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಇವರ ಮಧ್ಯೆ ಒಂದು ಸಂಪರ್ಕ ಸೇತುವೆಯೇ ಆಗಿದೆ.

ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿನ ಕಾರ್ಮಿಕ ಇಲಾಖೆ, ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಕರ್ನಾಟಕ ರಾಜ್ಯ ವಿಮಾ ಯೋಜನೆಯ ವ್ಯದ್ಯಕೀಯ ಸೇವೆಗಳ ಇಲಾಖೆ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕರ್ನಾಟಕ ರಾಜ್ಯ ಅಸಂಘಟಿತೆ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಕರ್ನಾಟಕ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನಾ ಸೊಸೈಟಿಯ ಕಾರ್ಯ ಚಟುವಟಿಕೆಗಳತ್ತಲೂ ಈ ಸಹಾಯವಾಣಿಯು ಕುಂದು-ಕೊರತೆ ನಿವಾರಣಾ ಕಾರ್ಯವಿಧಾನವಾಗಿ ಕಾರ್ಯನಿರ್ವಹಿಸುತ್ತದೆ. ಇದಲ್ಲದೆ, ಕಟ್ಟಡ ಮತ್ತು ಇತರೆ ನಿರ್ಮಾನ ಕಾರ್ಮಿಕರ ಕಲ್ಯಾಣ ಮಂಡಳಿಯು ಕಟ್ಟಡ ಕಾರ್ಮಿಕರಿಗೆ ಹೆಚ್ಚಿನ ಯೋಜನೆಗಳನ್ನು ವಿಸ್ತರಿಸಲು ಯೋಜಿಸಲಾಗಿದೆ.

**ಸಹಾಯವಾಣಿಯ ಪ್ರಮುಖ ಉದ್ದೇಶಗಳು:**

ಕಾರ್ಮಿಕರಲ್ಲಿ ಸರ್ಕಾರದ ವಿವಿಧ ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಲು ಮತ್ತು ಇತರೆ ಸಾಮಾಜಿಕ ಭದ್ರತಾ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಿ ಅವರಲ್ಲಿ ಅದರ ಬಗ್ಗೆ ಜ್ಞಾನವನ್ನು ಹೆಚ್ಚಿಸುವುದು, ಕಾರ್ಮಿಕರನ್ನು ಕಾರ್ಮಿಕ ಕಲ್ಯಾಣ ಯೋಜನೆಗಳು ಮತ್ತು ಸಾಮಾಜಿಕ ಭದ್ರತಾ ಯೋಜನೆಗಳಿಗೆ ನೊಂದಾಯಿಸಿ ಅವರಿಗೆ ಅದರ ಪ್ರಯೋಜನ ತಲುಪುವಂತೆ ಮಾಡುವುದು, ಕಾರ್ಮಿಕರಿಗೆ ಅವರ ಉದ್ಯೋಗಕ್ಕೆ ಸಂಬಂಧಿಸಿದ ದೂರುಗಳು, ಕೆಲಸದ ಸ್ಥಳದಲ್ಲಿ ಸುರಕ್ಷತೆ, ಔದ್ಯೋಗಿಕ ಆರೋಗ್ಯ, ಕೆಲಸದ ಸಮಯವನ್ನು ನಿಯಂತ್ರಣ, ಕನಿಷ್ಠ ವೇತನ ಖಾತಿ ಮತ್ತು ವೇತನ ಪವತಿ, ಪ್ರಸೂತಿ ಸೌಲಭ್ಯ, ಬಾಲಕಾರ್ಮಿಕರ ನೇಮಕಾತಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಮತೆ ಅವರ ಕುಂದುಕೊರತೆಗಳಿಗೆ ಪರಿಹಾರ ಒದಗಿಸುವುದು, ಕಾರ್ಮಿಕರಿಗೆ ಅವರ ಹಕ್ಕುಗಳು ಮತ್ತು ಬಾಧ್ಯತೆಗಳ ಬಗ್ಗೆ ಮಾಹಿತಿ ನೀಡುವುದಾಗಿದೆ.

## <u>ಫೆಬ್ರವರಿ 7 ರಿಂದ 9 ರವರೆಗೆ</u>

# <u>ರಾಜ್ಯ ಮಟ್ಟದ ಪಶುಮೇಳ – 2020</u>

**ಬೆಂಗಳೂರು ಫೆಬ್ರವರಿ 4 (ಕರ್ನಾಟಕ ವಾರ್ತೆ)**

ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಫೆಬ್ರವರಿ 7 ರಿಂದ 9 ರವರೆಗೆ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣ, ನಂದಿನಗರ, ಬೀದರ್‌ನಲ್ಲಿ "ರಾಜ್ಯ ಮಟ್ಟದ ಪಶುಮೇಳ –2020" ಅನ್ನು ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಫೆಬ್ರವರಿ 7 ರಂದು ಬೆಳಿಗ್ಗೆ 11.00 ಗಂಟೆಗೆ ರಾಜ್ಯದ ಮಟ್ಟದ ಪಶುಮೇಳವನ್ನು ಉದ್ಘಾಟಿಸಲಿದ್ದಾರೆ.

ಬೀದರ್ ದಕ್ಷಿಣ ಕ್ಷೇತ್ರ ಶಾಸಕ ಬಂಡೆಪ್ಪ ಖಾಶೆಂಪೂರ ಅವರು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಸಮಾರಂಭದಲ್ಲಿ ಉಪ ಮುಖ್ಯಮಂತ್ರಿ ಹಾಗೂ ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವರು ಆದ ಗೋವಿಂದ ಎಂ. ಕಾರಜೋಳ, ಉಪ ಮುಖ್ಯಮಂತ್ರಿ ಹಾಗೂ ವೈದ್ಯಕೀಯ ಶಿಕ್ಷಣ, ಐಟಿ, ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಆದ ಡಾ. ಅಶ್ವಥ್ ನಾರಾಯಣ್ ಸಿ.ಎನ್. ಉಪ ಮುಖ್ಯಮಂತ್ರಿ ಹಾಗೂ ಸಾರಿಗೆ, ಕೃಷಿ ಮತ್ತು ರೇಷ್ಮೆ ಸಚಿವರಾದ ಲಕ್ಷ್ಮಣ ಸಂಗಪ್ಪ ಸವದಿ ಅವರು ಸೇರಿದಂತೆ ಪಶುಸಂಗೋಪನೆ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಬೀದರ ಮತ್ತು ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಪ್ರಭು ಬಿ. ಚವ್ಹಾಣ್, ಮಾಜಿ ಮುಖ್ಯಮಂತ್ರಿ ಹಾಗೂ ವಿರೋಧ ಪಕ್ಷ ನಾಯಕ ಸಿದ್ದರಾಮಯ್ಯ, ಗೃಹ ಮತ್ತು ಸಹಕಾರ ಸಚಿವ ಬಸವರಾಜ ಬೊಮ್ಮಾಯಿ ಹಾಗೂ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಕ್ಕರೆ ಸಚಿವ ಸಿ.ಟಿ. ರವಿ ಅವರು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿರುವರು.

## ಸಚಿವರ ಪ್ರವಾಸ

**ಬೆಂಗಳೂರು ಫೆಬ್ರವರಿ 4 (ಕರ್ನಾಟಕ ವಾರ್ತೆ)**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಸಕಾಲ ಹಾಗೂ ಕಾರ್ಮಿಕ ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಎಸ್. ಸುರೇಶ್‌ಕುಮಾರ್ ಅವರು ಫೆಬ್ರವರಿ 5 ರಂದು ಕೋಲಾರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು, ಅದೇ ದಿನ ನಗರಕ್ಕೆ ಹಿಂದಿರುಗಲಿದ್ದಾರೆ.

## ಮೈಸೂರು ವಿಭಾಗ ಮಟ್ಟದ ಅಹವಾಲು ಸ್ವೀಕಾರ

ಬೆಂಗಳೂರು ಫೆಬ್ರವರಿ 4 (ಕರ್ನಾಟಕ ವಾರ್ತೆ)

ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗವು ರಾಜ್ಯದ ನಾಲ್ಕು ವಿಭಾಗಗಳಲ್ಲಿ ಅಹವಾಲು ಸ್ವೀಕೃತಿ ಮತ್ತು ಸಮಾಲೋಚನಾ ಸಭೆಯನ್ನು ಆಯೋಜಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಹೆಚ್ಚಿಸುವ ಬಗ್ಗೆ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸುತ್ತಿದೆ.

ಈ ಸಂಬಂಧ ಫೆಬ್ರವರಿ 10 ರ ಸೋಮವಾರದಂದು ಬೆಳಿಗ್ಗೆ 10.30 ಗಂಟೆಗೆ "ಕರ್ನಾಟಕ ಕಲಾ ಮಂದಿರ", ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಹುಣಸೂರು ರಸ್ತೆ, ಮೈಸೂರು ನಗರದಲ್ಲಿ ಮೈಸೂರು ವಿಭಾಗಮಟ್ಟದ ಅಹವಾಲು ಸ್ವೀಕೃತಿ ಮತ್ತು ಸಮಲೋಚನಾ ಸಭೆಯನ್ನು ಏರ್ಪಡಿಸಿದೆ.

ಮೈಸೂರು ವಿಭಾಗದ ಎಂಟು ಜಿಲ್ಲೆಗಳ (ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ಮಡಿಕೇರಿ, ದಕ್ಷಿಣ ಕನ್ನಡ, ಹಾಸನ, ಮಂಡ್ಯ ಮತ್ತು ಉಡುಪಿ ಜಿಲ್ಲೆ) ಸಾರ್ವಜನಿಕರು ಈ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಿಸುವ ಬಗ್ಗೆ ತಮ್ಮ ಅಭಿಪ್ರಾಯವನ್ನು ಲಿಖಿತ ರೂಪದಲ್ಲಿ ಅಥವಾ ಮೌಖಿಕವಾಗಿ ಸಲ್ಲಿಸಬಹುದಾಗಿದೆ.

ಮೌಖಿಕವಾಗಿ ಅಭಿಪ್ರಾಯ ಮಂಡಿಸುವವರು ತಮ್ಮ ಹೆಸರನ್ನು ಕಾರ್ಯಕ್ರಮದ ಮುಂಚೆಯೇ ನಿಗದಿಪಡಿಸಿದ ಕೌಂಟರ್‌ಗಳಲ್ಲಿ ನೊಂದಾಯಿಸಿಕೊಳ್ಳಬೇಕು. ಹೆಸರನ್ನು ನೊಂದಾಯಿಸಿಕೊಂಡವರಿಗೆ ಮಾತ್ರ ಸಮಾಲೋಚನಾ ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ಮೌಖಿಕವಾಗಿ ತಿಳಿಸಲು ಅವಕಾಶವಿರುತ್ತದೆ. ಇದನ್ನು ಜಿಲ್ಲಾವಾರು ನೋಂದಾಯಿಸಲಾಗುತ್ತದೆ. ಲಿಖಿತ ರೂಪದಲ್ಲಿ ಮನವಿ ಸಲ್ಲಿಸುವವರು ಸಭೆಯ ಸಮಯದಲ್ಲಿ ಸಂಬಂಧಿಸಿದ ಅಧಿಕಾರಿಗೆ ಜಿಲ್ಲಾವಾರು ಸಲ್ಲಿಸಬಹುದು.

ಮೌಖಿಕವಾಗಿ ವಿಚಾರ ಮಂಡಿಸುವವರು ತಮ್ಮ ಅಭಿಪ್ರಾಯವನ್ನು ವಿಷಯಕ್ಕೆ ಸೀಮಿತ ಮಾಡಿಕೊಂಡು ಸಂಕ್ಷಿಪ್ತವಾಗಿ ಅಭಿಪ್ರಾಯ ಮಂಡಿಸಬೇಕು ಎಂದು ಎಚ್.ಎನ್. ನಾಗಮೋಹನ ದಾಸ್ ಆಯೋಗವು ಪ್ರಕಟಣೆಯಲ್ಲಿ ತಿಳಿಸಿದೆ.

## ಸಂತಾಪ ಸೂಚನೆ

ಬೆಂಗಳೂರು ಫೆ. 4 (ಕರ್ನಾಟಕ ವಾರ್ತೆ):

ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ತಿನ ಮಾಜಿ ಸಭಾಪತಿಯಾಗಿದ್ದ ಡಿ. ಮಂಜುನಾಥ ಅವರ ನಿಧನಕ್ಕೆ ಉಪಮುಖ್ಯಮಂತ್ರಿಗಳಾದ ಗೋವಿಂದ ಎಂ ಕಾರಜೋಳ ಅವರು ತೀವ್ರ ಸಂತಾಪ ಸೂಚಿಸಿದ್ದಾರೆ.

ಹಿರಿಯೂರು ವಿಧಾನ ಸಭಾ ಕ್ಷೇತ್ರದಿಂದ 3 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಅವರು, ರಾಜ್ಯ ಸರ್ಕಾರದಲ್ಲಿ ಹಣಕಾಸು, ಕಾರ್ಮಿಕ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಉನ್ನತ ಶಿಕ್ಷಣ , ಅರಣ್ಯ ಸಚಿವರಾಗಿ ದಕ್ಷ ಹಾಗೂ ಗಣನೀಯ ಸೇವೆ ಸಲ್ಲಿಸಿದ್ದಾರೆ. ಧೀರ್ಘ ಕಾಲದ ಅನಾರೋಗ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದ ಸುದ್ದಿ ತಿಳಿದು ಅತೀವ ದುಃಖ ಉಂಟಾಗಿದೆ. ಶ್ರೀಯುತರ ನಿಧನದಿಂದ ದಲಿತ ಮುಂದಾಳು ಹಾಗೂ ಹಿರಿಯ ರಾಜಕೀಯ ಮುತ್ಸದ್ದಿ ಅವರನ್ನು ಕಳೆದುಕೊಂಡಂತಾಗಿದೆ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಕುಟುಂಬ ವರ್ಗದವರಿಗೆ ಹಾಗೂ ಅಭಿಮಾನಿ ಬಳಗಕ್ಕೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಉಪಮುಖ್ಯಮಂತ್ರಿಗಳಲ್ಲಿ ತಮ್ಮ ಸಂತಾಪದಲ್ಲಿ ತಿಳಿಸಿದ್ದಾರೆ.

**ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವಿವಿಧ ವಲಯಗಳನ್ನು ಪುನರ್ ವಿನ್ಯಾಸಗೊಳಿಸಿರುವ (Re-Organisation) ಬಗ್ಗೆ.**

**ಬೆಂಗಳೂರು ಫೆ. 4 (ಕರ್ನಾಟಕ ವಾರ್ತೆ):**

ಬೆಂಗಳೂರು ಜಲಮಂಡಳಿಯು ಸಾರ್ವಜನಿಕರಿಗೆ ಇನ್ನೂ ಉತ್ತಮ ಸೇವೆಯನ್ನು ಒದಗಿಸುವ ದೃಷ್ಠಿಕೋನದಿಂದ ಕಾರ್ಯವ್ಯಾಪ್ತಿಯನ್ನು ಪುನರ್‌ವಿನ್ಯಾಸಗೊಳಿಸಲಾಗಿದೆ. ಅದರಂತೆ ಮುಖ್ಯ ಅಭಿಯಂತರರು(ನಿರ್ವಹಣೆ) ವಲಯವನ್ನು ಮುಖ್ಯ ಅಭಿಯಂತರರು (ಪೂರ್ವ) ಮತ್ತು ಮುಖ್ಯ ಅಭಿಯಂತರರು(ಪಶ್ಚಿಮ) ಎಂದು ಎರಡು ಮುಖ್ಯ ಅಭಿಯಂತರರ ವಲಯಗಳನ್ನು ರಚಿಸಲಾಗಿದೆ.

ಮುಂದುವರೆದಂತೆ ಈ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವ ಪ್ರದೇಶಗಳಲ್ಲಿನ ಸಾರ್ವಜನಿಕರು ತಮ್ಮ ಕುಂದು ಕೊರತೆಗಳ ಅಹವಾಲುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳ ಬಹುದಾಗಿದೆ.

<table>
<tr><th colspan="2">ಮುಖ್ಯ ಅಭಿಯಂತರರು(ಪೂರ್ವ) ವಲಯ</th><th></th><th colspan="2">ಮುಖ್ಯ ಅಭಿಯಂತರರು(ಪಶ್ಚಿಮ) ವಲಯ</th></tr>
<tr><td colspan="2">ಶ್ರೀ ಬಿ.ಎಂ.ಸೋಮಶೇಖರ್<br>ಮುಖ್ಯ ಅಭಿಯಂತರರು(ಪೂರ್ವ)<br>ಮೊ.ಸಂ:9448068823</td><td></td><td colspan="2">ಶ್ರೀ ಎಂ.ದೇವರಾಜು<br>ಮುಖ್ಯ ಅಭಿಯಂತರರು(ಪಶ್ಚಿಮ)<br>ಮೊ.ಸಂ:9845444029</td></tr>
<tr><td>ಶ್ರೀ ಕೆ.ಎನ್.ರಾಜೀವ್<br>ಅಪರ ಮುಖ್ಯ ಅಭಿಯಂತರರು<br>(ಪೂರ್ವ-1)</td><td>ಶ್ರೀ ಬಿ.ಸುರೇಶ್<br>ಅಪರ ಮುಖ್ಯ ಅಭಿಯಂತರರು<br>(ಪೂರ್ವ-2)</td><td></td><td>ಶ್ರೀ ಎಂ.ದೇವರಾಜು<br>ಅಪರ ಮುಖ್ಯ</td><td>ಶ್ರೀ ಕೆ.ಎನ್.ಪರಮೇಶ್<br>ಅಪರ ಮುಖ್ಯ</td></tr>
</table>

| | | | | |
|---|---|---|---|---|
| **ಮೊ.ಸಂ:9845444114** | **ಮೊ.ಸಂ: 9845444078** | | ಅಭಿಯಂತರರು<br>(ಪಶ್ಚಿಮ–1)<br>**ಮೊ.ಸಂ:9845444029** | ಅಭಿಯಂತರರು<br>(ಪಶ್ಚಿಮ–2)<br>**ಮೊ.ಸಂ:9845444103** |
| **ಶ್ರೀ ರವೀಂದ್ರ ಕುಮಾರ್**<br>ಕಾನಿಅ(ದಕ್ಷಿಣ ಪೂರ್ವ–1)<br>**ಮೊ.ಸಂ:9845444054**<br>**ಕಾರ್ಯವ್ಯಾಪ್ತಿ:**<br>ಹಲಸೂರು, ದೊಮ್ಮಲೂರು, ಜಾನ್ಸನ್ ಮಾರುಕಟ್ಟೆ, ಸಿ.ವಿ.ರಾಮನ್ ನಗರ, ದೊಡ್ಡನಕುಂದಿ, ಎ.ನಾರಾಯಣಪುರ, ಇಂದಿರಾನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು | **ಶ್ರೀ ಕೆ. ಲಕ್ಷ್ಮೀಕಾಂತ್**<br>ಕಾನಿಅ(ದಕ್ಷಿಣ)<br>**ಮೊ.ಸಂ:9845444121**<br>**ಕಾರ್ಯವ್ಯಾಪ್ತಿ:**<br>ಕುಮಾರಸ್ವಾಮಿ ಲೇಔಟ್, ಬನಗಿರಿ ನಗರ, ಪೂರ್ಣಪ್ರಜ್ಞಾಲೇಔಟ್, ಕೊತ್ತನೂರು ದಿಣ್ಣೆ, ವಿಜಯಬ್ಯಾಂಕ್ ಲೇಔಟ್, ಜೆ.ಪಿ.ನಗರ, ಹೆಚ್.ಎಸ್.ಆರ್.ಲೇಔಟ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು | | **ಶ್ರೀ ಕುಮಾರ್‌ನಾಯಕ್.ಎಲ್**<br>ಕಾನಿಅ(ಉತ್ತರ ಪಶ್ಚಿಮ–1)<br>**ಮೊ.ಸಂ:9845444064**<br>**ಕಾರ್ಯವ್ಯಾಪ್ತಿ:**<br>ನಂದಿನಿಲೇಔಟ್, ರಾಜಾಜಿನಗರ, ಮಹಾಲಕ್ಷ್ಮೀ ಲೇಔಟ್, ನಾಗರಬಾವಿ, ವೆಸ್ಟ್ ಆಫ್ ಕಾರ್ಡ್‌ರಸ್ತೆ, ಅನ್ನಪೂರ್ಣೇಶ್ವರಿ ನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. | **ಶ್ರೀ ಸುರೇಶ್.ಬಿ**<br>ಕಾನಿಅ(ಕೇಂದ್ರ)<br>**ಮೊ.ಸಂ: 9845444078**<br>**ಕಾರ್ಯವ್ಯಾಪ್ತಿ:**<br>ಚಿಕ್ಕಲಾಲ್ ಬಾಗ್, ಹೈಗ್ರೌಂಡ್ಸ್, ಫ್ರೇಜರ್ ಟೌನ್, ಕೋಲ್ಸ್‌ಪಾರ್ಕ್, ಸುಧಾಮನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು |
| **ಶ್ರೀ ಬಿ.ಜಿ.ಪುರುಷೋತ್ತಮ್**<br>ಕಾನಿಅ(ಉತ್ತರ ಪೂರ್ವ–1)<br>**ಮೊ.ಸಂ:9845444013**<br>**ಕಾರ್ಯವ್ಯಾಪ್ತಿ:**<br>ಶ್ರೀರಾಮಪುರ, ಯಶವಂತಪುರ, ಮಲ್ಲೇಶ್ವರಂ, ಕುಮಾರಪಾರ್ಕ್, ಜಯಮಹಲ್, ಆರ್.ಟಿ.ನಗರ, ಸಂಜಯನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. | **ಶ್ರೀ ಎನ್.ಚಲಪತಿ**<br>ಕಾನಿಅ(ಪೂರ್ವ)<br>**ಮೊ.ಸಂ:9845444101**<br>**ಕಾರ್ಯವ್ಯಾಪ್ತಿ:**<br>ಹೆಚ್.ಬಿ.ಆರ್.ಲೇಔಟ್, ಬಾಣಸವಾಡಿ, ರಾಮಮೂರ್ತಿ ನಗರ, ಕೆ.ಆರ್.ಪುರಂ, ದೇವಸಂದ್ರ, ಹೂಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. | | **ಶ್ರೀ ಮಲ್ಲಿಕಾರ್ಜುನ್.ಎನ್.ಬಿ.**<br>ಕಾನಿಅ(ಉತ್ತರ ಪಶ್ಚಿಮ–2)<br>**ಮೊ.ಸಂ: 9740984165**<br>**ಕಾರ್ಯವ್ಯಾಪ್ತಿ:**<br>ಎಂ.ಇ.ಐ.ಲೇಔಟ್, ಬಾಹುಬಲಿ ನಗರ, ಪೀಣ್ಯ, ಪೀಣ್ಯದಾಸರಹಳ್ಳಿ, ಹೆಗ್ಗನಹಳ್ಳಿ, ಸುಂಕದಕಟ್ಟೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು | **ಶ್ರೀ ದಲಾಯತ್.ಬಿ.ಎಸ್.**<br>ಕಾನಿಅ(ಉತ್ತರ)<br>**ಮೊ.ಸಂ: 9845494130**<br>**ಕಾರ್ಯವ್ಯಾಪ್ತಿ:**<br>ಯಲಹಂಕ ಹಳೆ ಟೌನ್ ಮತ್ತು ನ್ಯೂಟೌನ್, ಜಕ್ಕೂರು, ಸಹಕಾರ್ ನಗರ, ವಿದ್ಯಾರಣ್ಯ ಪುರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು |
| **ಮುಖ್ಯ ಅಭಿಯಂತರರು(ಪೂರ್ವ) ವಲಯ** | | | **ಮುಖ್ಯ ಅಭಿಯಂತರರು(ಪಶ್ಚಿಮ) ವಲಯ** | |
| **ಶ್ರೀ ಬಿ.ಎಂ.ಸೋಮಶೇಖರ್**<br>ಮುಖ್ಯ ಅಭಿಯಂತರರು(ಪೂರ್ವ) | | | **ಶ್ರೀ ಎಂ.ದೇವರಾಜು**<br>ಮುಖ್ಯ ಅಭಿಯಂತರರು(ಪಶ್ಚಿಮ) | |

| | | | | |
|---|---|---|---|---|
| ಮೊ.ಸಂ:9448068823 | | | ಮೊ.ಸಂ:9845444029 | |
| | **ಶ್ರೀ ಹೆಚ್.ಎಸ್.ರವೀಂದ್ರ**<br>ಕಾನಿಅ(ದಕ್ಷಿಣ ಪೂರ್ವ–2)<br>**ಮೊ.ಸಂ:7760993676**<br>**<u>ಕಾರ್ಯವ್ಯಾಪ್ತಿ:</u>**<br>ಕೋರಮಂಗಲ, ಬೆಳ್ಳಂದೂರು, ಬಿ.ಟಿ.ಎಂ.ಲೇಔಟ್, ಭೈರಸಂದ್ರ, ಜೆ.ಪಿ.ನಗರ. ಹೊಂಬೇಗೌಡ ನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. | | **ಶ್ರೀ ಮಹೇಶ್.ಕೆ.ಎನ್.**<br>ಕಾನಿಅ( ಪಶ್ಚಿಮ)<br>**ಮೊ.ಸಂ: 9845444059**<br>**<u>ಕಾರ್ಯವ್ಯಾಪ್ತಿ:</u>**<br>ಮೈಸೂರು ರಸ್ತೆ, ಕೆಂಗೇರಿ ಉಪನಗರ, ಆರ್.ಆರ್.ನಗರ, ವಿಜಯನಗರ ಓ.ಹೆಚ್.ಟಿ., ಚಂದ್ರಲೇಔಟ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು | **ಶ್ರೀ ರಾಜೀವ್.ಜೆ.**<br>ಕಾನಿಅ( ದಕ್ಷಿಣ ಪಶ್ಚಿಮ)<br>**ಮೊ.ಸಂ: 9945518971**<br>**<u>ಕಾರ್ಯವ್ಯಾಪ್ತಿ:</u>**<br>ವಿ.ವಿ.ಪುರಂ, ಚಾಮರಾಜಪೇಟೆ, ಜೆ.ಜೆ.ಆರ್.ನಗರ, ಎಂ.ಎನ್.ಕೆ. ಗಿರಿನಗರ, ಹೊಸಕೆರೆಹಳ್ಳಿ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು |

# Re-organisation of the Bangalore Water Supply and Sewerage Board.

The jurisdiction of the Bangalore Water Supply And Sewerage Board has been Re-organised for providing better service to the public. Accordingly, the Chief Engineer (Maintenance) Zone is made up of Chief Engineer(East) and Chief Engineer (West).

Public can submit their grievances and complaints to the concerned officers, the Contact Details are as follows.

| **Chief engineer (East)** | | **Chief engineer(West )** | |
|---|---|---|---|
| **Sri.BM Somashekar**<br>Chief Engineer **(East)**<br>**Mob.9448068823** | | **Sri. M Devaraju**<br>Chief Engineer**(West)**<br>**Mob.9845444029** | |
| **Sri. KN Rajeev**<br>Additional Chief | **Sri. B Suresh**<br>Additional Chief | **Sri. M Devaraju**<br>Additional Chief | **Sri. KN Paramesh**<br>Additional Chief |

| Engineer**(East-1)**<br>**Mob.9845444114** | Engineer**(East-2)**<br>**Mob.9845444078** | Engineer(West-1)<br>Mob. **9845444029** | Engineer(West-2)<br>Mob.**9845444103** |
|---|---|---|---|
| **Sri. Ravindra Kumar**<br>EE(SouthEast-1)<br>**Mob.9845444054**<br>**Jurisdiction:**<br>Halsoor,Dommalur,Johnson Market,CV Raman nagar, Doddanakundi, A Narayanapura, Indiranagar, and surrounding areas | **Sri. K Laxmikanth**<br>EE(South)<br>**Mob.9845444121**<br>**Jurisdiction:**<br>Kumaraswami Layout, Banagiri nagar, Poorna Pragna Layout,Kothanur Dinne, JP Nagar, Vijaya Bank Layout, HSR Layut and Surrounding areas | **Sri. Kumar Nayak L**<br>EE (North West-1)<br>**Mob.9845444064**<br>**Jurisdiction:**<br>Nandini Layout,Rajajinagar, Nagarabhavi, Mahalakshmi Layout, West Of Chord Road, Annapoorneswari Nagar and surrounding areas. | **Sri. Suresh B**<br>EE(Central)<br>**Mob.9845444078**<br>**Jurisdiction:**<br>Chikka Lalbagh,Highgrounds ,Frazer town, Coles Park, Sudhama Nagar and surrounding areas |
| **Sri. BG Purushotham**<br>EE(North East-1)<br>**Mob.9845444013**<br>**Jurisdiction:**<br>Sriram Pura, Yeswanthpura, Malleswaram, Kumara Park, Jaya Mahal, RT Nagar, Sanjay Nagar and surrounding areas | **Sri. N Chalapathi**<br>EE(East)<br>**Mob.9845444101**<br>**Jurisdiction:**<br>H.B.R. Layout,Banaswadi, Ramamurthy Nagar, Hoodi, Devasandra, K.R.puram and surrounding Areas | **Sri. Mallikarjun NB**<br>EE(North West-2)<br>**Mob.9740984165**<br>**Jurisdiction:**<br>MEI layout,Bahubali Nagar, Peenya, Dasarahalli, Sunkada Katte,Heggana halli and surrounding areas | **Sri. Dalayath BS**<br>EE(North)<br>**Mob.9845494130**<br>**Jurisdiction:**<br>Yelahanka,Jakkur, Sahakarnagar, Vidyaranyapura and surrounding areas |

| **Chief engineer (East )** | | **Chief engineer(West)** | |
|---|---|---|---|
| **Sri.BM Somashekar**<br>Chief Engineer **(East)**<br>**Mob.9448068823** | | **Sri. M Devaraju**<br>Chief Engineer**(West)**<br>**Mob.9845444029** | |
| | **Sri. H.S. Ravindra**<br>EE(South East-2) | **Sri. Mahesh K.N**<br>EE(West) | **Sri. Rajeev K**<br>EE (South West) |

| | | | |
|---|---|---|---|
| | **Mob.7760993676**<br><br>**Jurisdiction:**<br><br>Koramangala, Bellandur,BTM Layout, Byrasandra, JP Nagar, Hombegowda Nagar and surrounding areas | **Mob.9845444059**<br><br>**Jurisdiction:**<br><br>Mysore road, Kengeri, RR Nagar, Vijayanagar OHT ,Chandra layout and surrounding areas | **Mob.9945518971**<br><br>**Jurisdiction:**<br><br>VV puram,, MNK park, Chamarajpet, JJR Nagar, Giri Nagar, Hosakerehalli and surrounding areas |

ಬೆಂಗಳೂರು ದರ್ಶಿನಿ ಸೇವೆಯಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ದರವನ್ನು ನಿಗದಿಪಡಿಸಿರುವ ಬಗ್ಗೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸಾರ್ವಜನಿಕ ಸಾರಿಗೆ ಸಂಸ್ಥೆಯಾಗಿದ್ದು, ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ, ಸುರಕ್ಷಿತ ಹಾಗೂ ವಿಶ್ವಾಸಾರ್ಹ ಸಾರಿಗೆ ಸೌಲಭ್ಯವನ್ನು ಒದಗಿಸುವ ಧ್ಯೇಯವನ್ನು ಹೊಂದಿರುತ್ತದೆ. ಈ ನಿಟ್ಟಿನಲ್ಲಿ ಬೆಂಗಳೂರು ನಗರಕ್ಕೆ ಹೊರ ಊರು / ಸ್ಥಳಗಳಿಂದ ಬರುವ ಪ್ರಯಾಣಿಕರಿಗೆ ನಗರದಲ್ಲಿರುವ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಲು ಅನುಕೂಲವಾಗುವಂತೆ **“ಬೆಂಗಳೂರು ದರ್ಶಿನಿ”** ಸೇವೆಯನ್ನು ಎರಡು ಮಾರ್ಗಗಳಲ್ಲಿ ಕಾರ್ಯಾಚರಣೆಗೊಳಿಸಲಾಗುತ್ತಿದೆ.

ಬೆಂಗಳೂರು ದರ್ಶಿನಿ ಮಾರ್ಗಗಳ ವಿವರಗಳು ಈ ಕೆಳಕಂಡಂತಿವೆ.

**ಬೆಂಗಳೂರು ದರ್ಶಿನಿ ಮಾರ್ಗ–01:**

ಕೆಂಪೇಗೌಡ ಬಸ್ ನಿಲ್ದಾಣದಿಂದ ಇಸ್ಕಾನ್, ವಿಧಾನಸೌಧ, ಟಿಪ್ಪು ಅರಮನೆ, ಗವಿಗಂಗಾಧರೇಶ್ವರ ದೇವಸ್ಥಾನ, ದೊಡ್ಡಬಸವಣ್ಣ ದೇವಸ್ಥಾನ, ಹಲಸೂರು ಲೇಕ್, ಕಬ್ಬನ್ ಪಾರ್ಕ್, ಸರ್.ಎಂ. ವಿಶ್ವೇಶ್ವರಯ್ಯ ವಸ್ತು ಸಂಗ್ರಹಾಲಯ, ವೆಂಕಟಪ್ಪ ಆರ್ಟ್ ಗ್ಯಾಲರಿ, ಕರ್ನಾಟಕ ಚಿತ್ರಕಲಾ ಪರಿಷತ್ ಮಾರ್ಗವಾಗಿ ಕೆಂಪೇಗೌಡ ಬಸ್ ನಿಲ್ದಾಣ (ವಾರದ ಎಲ್ಲಾ ದಿನಗಳು).

**ಬೆಂಗಳೂರು ದರ್ಶಿನಿ ಮಾರ್ಗ–02:**

ಕೆಂಪೇಗೌಡ ಬಸ್ ನಿಲ್ದಾಣದಿಂದ ಕಾಡುಮಲ್ಲೇಶ್ವರ ದೇವಸ್ಥಾನ, ಬೆಂಗಳೂರು ಅರಮನೆ, ಸೇಂಟ್ ಮೇರಿ ಬೆಸಲಿಕಾ ಚರ್ಚ್/ಶಿವಾಜಿನಗರ, ಹೆಚ್ಎಎಲ್ ಮ್ಯೂಸಿಯಂ, ಶಿವ ದೇವಸ್ಥಾನ (ಮುರುಗೇಶ್ ಪಾಳ್ಯ) ಲಾಲ್‌ಬಾಗ್ ವೆಸ್ಟ್‌ಗೇಟ್, ವಿಧಾನಸೌಧ / ಕರ್ನಾಟಕ ಉಚ್ಚ ನ್ಯಾಯಾಲಯ, ಜವಾಹರಲಾಲ್ ನೆಹರು ತಾರಾಲಯ ಮಾರ್ಗವಾಗಿ ಕೆಂಪೇಗೌಡ ಬಸ್ ನಿಲ್ದಾಣಕ್ಕೆ (ವಾರಾಂತ್ಯ & ರಜೆ ದಿನಗಳಲ್ಲಿ ಮಾತ್ರ) ಆಚರಣೆಯಾಗುತ್ತಿದೆ.

1. ಬೆಂಗಳೂರು ದರ್ಶಿನಿ ಸೇವೆಗಳಲ್ಲಿ ಪ್ರಸ್ತುತ ವಯಸ್ಕರಿಗೆ ರೂ.400/– (+ಜಿಎಸ್‌ಟಿ) ಹಾಗೂ ಮಕ್ಕಳಿಗೆ ರೂ.300/–(+ಜಿಎಸ್‌ಟಿ) ದರಗಳನ್ನು ನಿಗದಿಪಡಿಸಲಾಗಿರುತ್ತದೆ.

2. ಬೆಂಗಳೂರು ದರ್ಶಿನಿ ಸೇವೆಯಲ್ಲಿ ಪ್ರಯಾಣಿಸಲು ಸಾರ್ವಜನಿಕ ಪ್ರಯಾಣಿಕರು ಮುಂಗಡ ಬುಕ್ಕಿಂಗ್ ಮೂಲಕ ಆಸನಗಳನ್ನು ಕಾಯ್ದಿರಿಸಿಕೊಳ್ಳಲು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅವತಾರ್ ತಂತ್ರಾಂಶದಲ್ಲಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ಬೆಂಗಳೂರು ದರ್ಶಿನಿ ವಿಶೇಷ ಸಾರಿಗೆ ಸೇವೆಯನ್ನು ಮತ್ತಷ್ಟು ಜನಪ್ರಿಯತೆ ಹಾಗೂ ಆಕರ್ಷಣೀಯಗೊಳಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ **ಬೆಂಗಳೂರು ದರ್ಶಿನಿ** ಸೇವೆಯಲ್ಲಿ ರಿಯಾಯಿತಿ ದರದಲ್ಲಿ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಸದರಿ ಸೌಲಭ್ಯದ ರೂಪುರೇಷೆಗಳು ಈ ಕೆಳಕಂಡಂತಿವೆ.

- ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲಾ ಹಾಗೂ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಒಟ್ಟಾರೆ ಬುಕಿಂಗ್ (bulk booking) ಮಾಡಿದಲ್ಲಿ ರಿಯಾಯಿತಿ ದರದಲ್ಲಿ ಪ್ರಯಾಣಕ್ಕೆ ಅವಕಾಶ ನೀಡಲಾಗಿದೆ ಹಾಗೂ ಒಂದು ಆಸನಕ್ಕೆ **ರೂ.200/-** (+ಜಿಎಸ್‌ಟಿ) ಪ್ರಯಾಣ ದರವನ್ನು ನಿಗದಿಪಡಿಸಲಾಗಿದೆ.
- ಸದರಿ ಸೌಲಭ್ಯವನ್ನು ಪಡೆಯಲು **"ಬೆಂಗಳೂರು ದರ್ಶಿನಿ"** ಬಸ್ಸು ಸೇವೆಯಲ್ಲಿನ ಎಲ್ಲಾ ಆಸನಗಳನ್ನು ಕಾಯ್ದಿರಿಸಬೇಕಾಗುತ್ತದೆ.
- ಬಸ್ಸಿನಲ್ಲಿ ಲಭ್ಯವಿರುವ ಆಸನ ಸಂಖ್ಯೆಗನುಗುಣವಾಗಿ ವಿದ್ಯಾರ್ಥಿಗಳು/ ಬೋಧಕ ಸಿಬ್ಬಂದಿಗಳು ಪ್ರಯಾಣಿಸಬಹುದಾಗಿದೆ. ಆಸನ ಸಂಖ್ಯೆಗಿಂತ ಹೆಚ್ಚು ವಿದ್ಯಾರ್ಥಿಗಳು/ ಬೋಧಕ ಸಿಬ್ಬಂದಿಗಳು ಪ್ರಯಾಣಿಸುವಂತಿಲ್ಲ.
- ಬೆಂಗಳೂರು ದರ್ಶಿನಿ ಸೇವೆಗಳಲ್ಲಿನ ಆಸನಗಳನ್ನು ಸಂಬಂಧಿಸಿದ ಶಿಕ್ಷಣ ಸಂಸ್ಥೆಯ ಪ್ರತಿನಿಧಿಗಳು ವೈಯಕ್ತಿಕವಾಗಿ ಬಂದು ಕೆಂಪೇಗೌಡ ಬಸ್ ನಿಲ್ದಾಣ ಅಥವಾ ಸಂಬಂಧಿಸಿದ ಘಟಕದಲ್ಲಿ ಲಿಖಿತ ಮನವಿಯನ್ನು ವಿದ್ಯಾರ್ಥಿಗಳ ಹಾಗೂ ಸಿಬ್ಬಂದಿಗಳ ಹೆಸರು/ ವಯಸ್ಸಿನ ವಿವರಗಳೊಂದಿಗೆ ಸಲ್ಲಿಸಿ, ಪೂರ್ತಿ ಪ್ರಯಾಣ ದರವನ್ನು ಪಾವತಿಸುವುದು.
- ಒಮ್ಮೆ ಪಾವತಿಸಿದ ಪ್ರಯಾಣದರವನ್ನು ಹಿಂತಿರುಗಿಸಲಾಗುವುದಿಲ್ಲ.
- ಬೆಂಗಳೂರು ದರ್ಶಿನಿ ಸೇವೆಗಳಲ್ಲಿನ ಪ್ರಯಾಣ ದರದಲ್ಲಿ ಯಾವುದೇ ಪ್ರವೇಶ ಶುಲ್ಕ (Entrance Fee) ಒಳಗೊಂಡಿರುವುದಿಲ್ಲ.
- ಬೆಂಗಳೂರು ದರ್ಶಿನಿ ಸೇವೆಗಳ ಕಾರ್ಯಾಚರಣೆಯನ್ನು ಕೆಂಪೇಗೌಡ ಬಸ್ ನಿಲ್ದಾಣದಿಂದ ಪ್ರಾರಂಭಿಸಿ, ನಗರ ವೀಕ್ಷಣೆ ನಂತರ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಬಂದು ಮುಕ್ತಾಯಗೊಳಿಸುವುದು.

Special discount for students in BMTC Bengaluru Darshini services.

BMTC is committed to provide efficient, adequate, economical transport services to the travelling public. BMTC has implemented various services and amenities for the benefit of the travelling public and has gained the encouragement and patronage from the commuters. For the convenience of the tourists visiting the city, BMTC is operating Bengaluru Darshini services on two routes. Details are as below:

**Bengaluru Darshini Route No-01:**

Starting from Kempegowda Bus Station visits ISKCON, Vidhana Soudha, Tippu Palace, Gavigangadhareshwara Temple, Bull Temple, Halasuru Lake, Cubbon Park, Sir. M. Vishveswaraya Museum, Venkatappa Art Gallery, Karnataka Chitrakala Parishat and back to Kempegowda Bus Station (operated on all days).

**Bengaluru Darshini Route No-02:**

Starting from Kempegowda Bus Station via Kadumalleshwara Temple, Bengaluru Palace, St. Mary Basilica Church/Shivajinagar, HAL museum, Shiva Temple (Murugeshpalya), Lalbagh West gate, Vidhana Soudha/Karnataka High Court, Jawaharlal Nehru Planetarium and back to Kempegowda Bus Station (Operated during weekends and holidays).

1. The Fare for both the services is Rs. 400/- (+ GST) for Adults and Rs. 300/- (+GST) for Children.
2. To facilitate passengers, advance reservation of seats has been provided in KSRTC Awatar software.

In order to promote the Bengaluru Darshini Services, BMTC is offering the service to Primary, Higher Secondary School and P.U. College Students at discount rates on the following lines.

- Bulk booking facility at a concessional rate of Rs.200/- + GST per seat can be availed by the Primary, Higher Primary, High-School and Pre-University College Students.
- All the available seats in the bus should be booked to avail the service.
- Only the seating capacity students/staff are allowed.
- The bookings can be made at Kempe Gowda Bus Station or at any Depots by making full payment. The name and age of students and teaching staff of the Educational institutions to be submitted.
- Payment once made will not be refunded.
- Ticket fare of Bengaluru Darshini will not include any Entrance fee.
- The Service will begin and terminate at Kempe Gowda Bus Stand.